ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Monday, the 3rd March, 1980/Phalguna 13, 1901

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(To which Oral Answers were given)

Mis-use of controlled commodities in Bellary Central and Co-operative Wholesale Stores.

120. SRI M. RAMAPPA (Kurugodu)—Will the Minister for Co-operation be pleased to state :—

(a) whether it is a fact that the Government have conducted enquiry in to the mis-use of controlled commodities by the Bellary Central and Co-operative Wholesale Stores and the Janatha Bazar, Bellary during the period 1975-78 ;

(b) whether the enquiry has been completed ; if not, the reasons for delay ;

(c) who are all the officials and non-Officials found guilty in mis-use and corruptionte. ?

SRI A.B. JAKANUR (Minister for Co-operation),—

(a) Yes.

(b) The enquiry has been completed.

(c) No one has been found guilty of corruption. But some Officials and non-Officials are found guilty of mis-use of commodities dealt in by the Stores.

ಶ್ರೀ ಎಂ. ರಾಮಪ್ಪ.—ಅಧಿಕಾರ ದುರುಪಯೋಗ ಪಡಿಸಿಕೊಂಡವರ ಮೇಲೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸುವರೆ ?

ಶ್ರೀ ಎ.ಬಿ. ಜಕನೂರ್.—ಯಾರು ಯಾರು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಕಂಡುಬಂದಿದೆ. ಅವರ ಮೇಲೆ ಒಳನೇ ಕಲಂನ ಕೆಳಗೆ ಪೂರ್ಣ ತನಿಖೆ ಮಾಡಲು ತಿಳಿಸಲಾಗಿದೆ. ಆದರೆ, ತನಿಖೆ ಇನ್ನೂ ಮುಗಿದ ಹಾಗೆ ನನಗೆ ಕಾಣಿಸಲಿಲ್ಲ.

ಶ್ರೀ ಎಂ. ರಾಮಪ್ಪ.—ಮೂರು ವರ್ಷಗಳಾದರೂ ಇನ್ನೂ ತನಿಖೆ ಮುಗಿಯದಿರುವುದಕ್ಕೆ ಕಾರಣವೇನು ?

ಶ್ರೀ ಎ.ಬಿ. ಜಕನೂರ್.—ಕಾರಣ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ಫೈಲ್ ನನಗೆ ಬಂದಿಲ್ಲ. ತನಿಖೆ ಇನ್ನೂ ಮುಗಿದಿಲ್ಲ. ಆದಷ್ಟು ಜಾಗ್ರತೆ ತನಿಖೆ ಮುಗಿಸಲಿಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಡಿ. ನಾರಾಯಣದಾಸ್.—(೧) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು ಕೆಲವು ಅಧಿಕಾರಿಗಳು ಹಾಗೂ ಖಾಸಗಿ ಸದಸ್ಯರುಗಳು ಮಳಿಗೆಯಲ್ಲಿನ ಸರಕುಗಳನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಕಂಡುಬಂದಿದೆ ಎಂದು ತಿಳಿಸಿದ್ದಾರೆ. ಹಾಗಾದರೆ ಅವರು ಯಾರು ಯಾರು ? ಮತ್ತು ಎಷ್ಟೆಷ್ಟು ಬೆಲೆಬಾಳುವ ಸರಕುಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ?

ಶ್ರೀ ಎ.ಬಿ. ಜಕನೂರ್.—ಅವರು ಯಾರು ಯಾರೆಂದರೆ.—೧) ಶ್ರೀ ಎಲ್. ಬಿ. ಜೋಷಿ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್, ೨) ಶ್ರೀ ಬಿ. ರಾಮಸ್ವಾಮಿ, ಮ್ಯಾನೇಜರ್, ಜನತಾ ಬಜಾರ್, ೩) ಶ್ರೀ ಕೆ.ವಿ ತಿರುಮಲಪ್ಪ, ಮಾಜಿ ಅಧ್ಯಕ್ಷರು, ೪) ಶ್ರೀ ಕೆ. ಸುಂದರ ನಾಯಕ್ಕು, ಡೈರೆಕ್ಟರ್, ೫) ಶ್ರೀ ಕೆ. ಭಾಸ್ಕರ ನಾಯಕ್ಕು, ಡೈರೆಕ್ಟರ್, (ಗೌರ್ನಮೆಂಟ್ ನಾಮಿನಿ) ೬) ಶ್ರೀ ವೀರಭದ್ರಪ್ಪ, ಡೈರೆಕ್ಟರ್, ೭) ಶ್ರೀ ಮಹಂತಸ್ವಾಮಿ, ಡೈರೆಕ್ಟರ್, ಮತ್ತು ೮) ಸುಬ್ಬ ರಾಯಪ್ಪ, ಡೈರೆಕ್ಟರ್. ಇವರೆಲ್ಲ ಎಷ್ಟೆಷ್ಟು ಪ್ರಮಾಣದಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆನ್ನುವುದನ್ನು ನಿಗದಿಯಾಗಿ ಹೇಳುವುದಕ್ಕಾಗುವುದಿಲ್ಲ. ಒಂದು ಚೀಟಿ ಕೊಟ್ಟು ಇಂತವರಿಗೆ ಸಕ್ಕರೆ ಕೊಡಿ ಎಂದು ಇವರುಗಳು ಬರೆದುಕೊಟ್ಟಿದ್ದಾರೆ. ಇದರಲ್ಲಿ ಹಣದ ದುರುಪಯೋಗವಾಗಿಲ್ಲ, ಅಧಿಕಾರ ದುರುಪಯೋಗ ಮಾತ್ರ ಆಗಿರುವುದು. ಎಷ್ಟು ಪ್ರಮಾಣದಲ್ಲಿ ಇವರುಗಳು ಅಧಿಕಾರ ದುರುಪಯೋಗ ಮಾಡಿಕೊಂಡಿರುವರೆನ್ನುವುದು ಪೂರ್ಣ ತನಿಖೆಯಾದ ಮೇಲೆ ಗೊತ್ತಾಗುತ್ತದೆ. ತನಿಖೆಯನ್ನು ಆದಷ್ಟು ಬೇಗ ಮುಗಿಸಲಾಗುವುದು.

ಶ್ರೀ ಎಂ. ರಾಮಪ್ಪ.—ಸರಕುಗಳನ್ನು ಪೆಚ್ಚು ಬೆಲೆಗೆ ಮಾರಿದರೆ ಅದು ಅಧಿಕಾರ ದುರುಪಯೋಗವಾಗುವುದಿಲ್ಲವೆ ?

ಶ್ರೀ ಎ.ಬಿ. ಜಕನೂರ್.—ಯಾರು ಯಾರು ಎಷ್ಟು ದುರುಪಯೋಗಗಳಿಗೆ ಹೊಣೆಯಾಗುತ್ತಾನ್ನುವುದು ಕೆಳಗೆ ತನಿಖೆಯಾದ ಮೇಲೆ ಗೊತ್ತಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಕೆಲವರು ಸರಕುಗಳನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿದೆ ಎಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ, ಇದರ ಬಗ್ಗೆ ಪೂರ್ಣ ತನಿಖೆ ನಡೆಸಲಾಗುವುದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಹಾಗಾದರೆ, ಯಾರಿಂದ ತನಿಖೆಯನ್ನು ನಡೆಸಲಾಗುವುದು ? ಜಾಗೃತ ಆಯೋಗಕ್ಕೆ ಇದನ್ನು ಒಪ್ಪಿಸಲಾಗುವುದೆ ? ಅಥವಾ ಅಧಿಕಾರಿಗಳ ಮಟ್ಟದಲ್ಲಿ ತನಿಖೆ ನಡೆಸಲಾಗುವುದೆ ? ಮತ್ತು ಎಷ್ಟು ವೇಳೆಗೆ ತನಿಖೆ ಮುಗಿಸಲಾಗುವುದು ಎಂಬುದನ್ನು ಮಾನ್ಯ ಸಚಿವರು ತಿಳಿಸುವರೆ ?

ಶ್ರೀ ಎ.ಬಿ. ಜಕನೂರ್.—ಸಹಕಾರ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಅವರು ಕೆಳಗೆ ಪೂರ್ಣ ತನಿಖೆಯನ್ನು ಮಾಡುವರು. ಅವರು ತನಿಖೆ ಮಾಡಿ ಅಧಿಕಾರಿಗಳು ಮತ್ತು ಅಧಿಕಾರೇತರರು ಇಷ್ಟಿಷ್ಟು ಪ್ರಮಾಣದಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆನ್ನುವುದನ್ನು ಕಂಡುಹಿಡಿದು, ಆದಕ್ಕವರನ್ನು ಹೊಣೆಗಾರರನ್ನಾಗಿ ಮಾಡುವರು. ಒಂದು ವೇಳೆ ಇದರಲ್ಲಿ ಹಣಕ್ಕೆ ಸಂಬಂಧಿಸಿದಂತೆ ದುರುಪಯೋಗವಾಗಿದ್ದರೆ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು, ಆ ಪ್ರಕರಣವನ್ನು ಕ್ರಿಮಿನಲ್ ಕೋರ್ಟಿಗೆ ಕಳುಹಿಸಲಾಗುವುದು.

ಶ್ರೀ ಮಳ್ಳೂರು ಆನಂದರಾವ್.—ತನಿಖೆಯನ್ನು ಎಷ್ಟು ಬೇಗ ಮುಗಿಸಲಾಗುವುದು ?

ಶ್ರೀ ಎ.ಬಿ. ಜಕನೂರ್.—ಸಾಧ್ಯವಾದಷ್ಟು ಬೇಗ ಮುಗಿಸಿ ತನಿಖಾ ವರದಿ ಕೊಡಲು ಆದೇಶ ಕೊಡಲಾಗುವುದು.

ಶ್ರೀ ಎಂ. ರಾಮಪ್ಪ.—ಇದರ ಸಂಬಂಧವಾಗಿ ಫುಡ್ ಸೆಲ್‌ನವರ ವರದಿ ಬಂದಿದೆಯೆ ?

ಶ್ರೀ ಎ.ಬಿ. ಜಕನೂರ್.—ಇಲ್ಲಿಯವರೆಗೆ ಅದರ ವರದಿ ಬಂದ ಹಾಗೆ ಕಾಣಲಿಲ್ಲ.